ಕನ್ನಡಪ್ರಭ

# ಏಕೀಕೃತ ಮಾರುಕಟ್ಟೆ ವ್ಯವಸ್ಥೆಗೆ ಸಿಎಂ ಚಾಲನೆ

Published: 23 Feb 2014 02:00 AM IST

**ಕ.ಪ್ರ.ವಾರ್ತೆ ಬೆಂಗಳೂರು ಫೆ. 22**

**ಕೃಷಿ ಉತ್ಪನ್ನಗಳ ಬೆಲೆಯನ್ನು ರೈತರೇ ನಿಗದಿಮಾಡುವ ಏಕೀಕೃತ ಮಾರುಕಟ್ಟೆ ವ್ಯವಸ್ಥೆಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಚಾಲನೆ ನೀಡಿದ್ದಾರೆ.**

**ಕೈಗಾರಿಕೆಗಳಲ್ಲಿ ತಯಾರಿಸಿದ ಉತ್ಪನ್ನಗಳಿಗೆ ಉದ್ಯಮಿಯೇ ಬೆಲೆ ನಿಗದಿಮಾಡುತ್ತಾರೆ. ಹಾಗೆಯೆ ಇನ್ನು ರಾಜ್ಯದಲ್ಲಿ ಕೃಷಿ ಉತ್ಪನ್ನಗಳಿಗೆ ರೈತರೆ ಬೆಲೆ ನಿಗದಿಮಾಡುತ್ತಾರೆ. ವರ್ತಕರು ಹೇಳುವ ಬೆಲೆ ಇಷ್ಟವಾಗದಿದ್ದರೇ ಅದನ್ನು ತಿರಸ್ಕರಿಸುವಂತಹ ಹಕ್ಕುಗಳನ್ನು ರೈತರಿಗೆ ನೀಡಲಾಗುತ್ತದೆ ಎಂದು ಅವರು ವಿಧಾನಸೌಧದಲ್ಲಿ ಯೋಜನೆಗೆ ಚಾಲನೆ ನೀಡಿ ತಿಳಿಸಿದರು.**

**ಮಾರುಕಟ್ಟೆ ಸುಧಾರಣೆ ಸಮಿತಿ ಶಿಫಾರಸಿನಂತೆ ರಾಜ್ಯದಲ್ಲಿ ಕೃಷಿ ಮಾರುಕಟ್ಟೆ ನೀತಿ ಜಾರಿಗೆ ತರಲಾಗಿದೆ. ರೈತರ ಕೃಷಿ ಉತ್ಪನ್ನಗಳಿಗೆ ಸ್ಪರ್ಧಾತ್ಮಕ ಹಾಗೂ ವೈಜ್ಞಾನಿಕ ಬೆಲೆ ನಿಗದಿ ಮಾಡಬೇಕು ಎನ್ನುವುದು ರಾಜ್ಯ ಸರ್ಕಾರದ ಆಶಯ. ಇದೇ ಕಾರಣದಿಂದ ಕೃಷಿ ಬೆಲೆ ಆಯೋಗ ರಚಿಸಲಾಗುತ್ತಿದೆ. ಇದರ ಮತ್ತೊಂದು ಮುಖವೇ ಏಕೀಕೃತ ಮಾರುಕಟ್ಟೆ ಯೋಜನೆ. ಇದರಿಂದ ರೈತನು ತಾನು ಬೆಳೆದ ಉತ್ಪನ್ನಗಳನ್ನು ಆನ್‌ಲೈನ್ ಮೂಲಕ ವ್ಯಾಪಾರ ಮಾಡಬಹುದು ಎಂದು ಹೇಳಿದರು.**

ಏಕೀಕೃತ ಮಾರುಕಟ್ಟೆ ವ್ಯವಸ್ಥೆ ಜಾರಿಗೆ ತರಬೇಕು ಎನ್ನುವುದು ದಶಕಗಳ ಹೋರಾಟವಾಗಿತ್ತು. ಉತ್ಪಾದನಾ ವೆಚ್ಚ ಆಧರಿಸಿ ಬೆಲೆ ನಿಗದಿ ಮಾಡುವುದು ರೈತನ ಹಕ್ಕು ಆಗಬೇಕೆಂಬ ವಾದಗಳಿದ್ದವು. ಕೃಷಿಯನ್ನು ಹೆಚ್ಚು ಆಕರ್ಷಣೀಯವಾಗಿಸಲು ಇಂತಹ ಬದಲಾವಣೆ ಅನಿವಾರ್ಯ. ಇದರಿಂದ ರೈತರು ಕೃಷಿಯಿಂದ ವಿಮುಖರಾಗುವುದನ್ನು ತಪ್ಪಿಸುವ ಜತೆಗೆ ಕೃಷಿ ಕೂಡ ಲಾಭದಾಯಕ ಕ್ಷೇತ್ರವಾಗಿ ರೂಪಗೊಳ್ಳುತ್ತದೆ ಎಂದು ಸಿದ್ದರಾಮಯ್ಯ ಅಭಿಪ್ರಾಯಪಟ್ಟರು. ರಾಜ್ಯದ ಜನತೆ ಕೃಷಿಯತ್ತ ಹೆಚ್ಚು ಒಲವು ತೋರಬೇಕು. ಕೃಷಿ ಬಿಟ್ಟು ನಗರ ಸೇರುವ ಜನರ ಸಂಖ್ಯೆ ಕಡಿಮೆಯಾಗಬೇಕು ಎನ್ನುವುದು ಸರ್ಕಾರದ ಆಶಯವಾಗಿದೆ. ಮತ್ತೊಂದೆಡೆ ರಾಜ್ಯದಲ್ಲಿ ಮಳೆ ಆಶ್ರಿತ ರೈತರ ಸಂಖ್ಯೆ ಹೆಚ್ಚಿದೆ. ಇದೇ ಕಾರಣದಿಂದ ಮೊನ್ನೆ ಮಂಡಿಸಿದ ಬಜೆಟ್ ನಲ್ಲಿ ಒಣ ಬೇಸಾಯ ಅಭಿವೃದ್ಧಿಗೆ ಒತ್ತು ನೀಡಲು ಕೃಷಿ ಭಾಗ್ಯ ಯೋಜನೆ ಘೋಷಿಸಲಾಗಿದೆ ಎಂದರು.